ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿನಾಂಕಃ **15.03.2023**

ಮುಖ್ಯ ವಿಚಾರಣೆಃ ಶ್ರೀ ಬಿ ಸಿ ಡಿ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರ ಹಾಜರುಪಡಿಸಿದ್ದು, ಅದರಲ್ಲಿ ಬರೆದಿರುವುದು ಸತ್ಯವಿರುತ್ತದೆ. ನಾನೆ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಈ ಕೇಸಿನಲ್ಲಿ ಹಾಜರು ಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ. ದಿಃ 03.07.1940 ರ ಕ್ರಯ ಪತ್ರದ ದೃಢೀಕೃತ ನಕಲನ್ನು ನಿಪಿ -1 ಎಂದು, 3 ಜಮಾ ಬಂಧಿಯ ಎಕ್ಸ್ಟ್ರಾಕ್ಟ್ ನ ಯಥಾ ನಕಲನ್ನು ನಿಪಿ-2 ರಿಂದ 4 ಎಂದು, ವಂಶವೃಕ್ಷದ ಪ್ರಮಾಣ ಪತ್ರವನ್ನು ನಿಪಿ-5 ಎಂದು, 4 ಆರ್ ಟಿ ಸಿಗಳನ್ನು ನಿಪಿ-6 ರಿಂದ 9 ಎಂದು, ಆಕಾರ್ ಬಂದ್ ನ್ನು ನಿಪಿ-10 ಎಂದು, ರೆವಿನ್ಯೂ ಸ್ಕೆಚ್ ನ್ನು ನಿಪಿ-11 ಎಂದು, ಎರಡು ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ-12 ಮತ್ತು 13 ಎಂದು, ಪೊಲೀಸ್ ಹಿಂಬರಹವನ್ನು ನಿಪಿ-14 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಶ್ರೀ ಪಿ ಕೆ ಜಿ ವಕೀಲರು ಕಾಲಾವಕಾಶ ಕೋರಿರುತ್ತಾರೆ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಸಿವಿಲ್ ನ್ಯಾಯಾಧೀಶರು,
ಕುಶಾಲನಗರ.